# ಪತ್ರಿಕಾ ಪ್ರಕಟಣೆ

**ಭಾರತದ ದುಡಿಮೆಯ ಕ್ಷೇತ್ರದ ಸ್ಥಿತಿಗತಿ ವರದಿ, 2026 ('ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ ವರದಿ, 2026'): ಭಾರತದ ಯುವ ಕಾರ್ಮಿಕರು ಬೆಳೆಯುತ್ತಿದ್ದಾರೆ ಮತ್ತು ಹೆಚ್ಚು ಸುಶಿಕ್ಷಿತರಾಗುತ್ತಿದ್ದಾರೆ**

ಈ ವರದಿಯು ಯುವಕರಿಗೆ ಉನ್ನತ ಶಿಕ್ಷಣದ ಅವಕಾಶಗಳು ಹೆಚ್ಚುತ್ತಿರುವ ಬಗೆಗೆ ಮತ್ತು ಶಿಕ್ಷಣ ಪಡೆದ ನಂತರ ಉದ್ಯೋಗವನ್ನು ದೊರಕಿಸಿಕೊಳ್ಳುವ ಹಂತದಲ್ಲಿ ಅವರು ಎದುರಿಸುವ ಸವಾಲುಗಳನ್ನು ಗಮನಕ್ಕೆ ತರುತ್ತದೆ.

**ನವದೆಹಲಿ, ಮಾರ್ಚ್ 17, 2026:** ಭಾರತವು ತನ್ನ ಯುವ ಜನತೆಯನ್ನು ಕೃಷಿಯಿಂದ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳತ್ತ ಚಲಿಸುವಂತೆ ಮಾಡುವ ಮೂಲಕ, ಹಾಗೂ ಲಿಂಗ ಮತ್ತು ಜಾತಿ ಆಧಾರಿತ ಅಸಮಾನತೆಗಳನ್ನು ಕಡಮೆ ಮಾಡುವ ಮೂಲಕ ಯುವಕರಿಗೆ (15 ರಿಂದ 29 ವರ್ಷದವರು) ಉನ್ನತ ಶಿಕ್ಷಣದ ಅವಕಾಶಗಳನ್ನು ವಿಸ್ತರಿಸುವಲ್ಲಿ ಮಹತ್ವದ ಪ್ರಗತಿಯನ್ನು ಸಾಧಿಸಿದೆ ಎಂದು 'ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ, 2026' ವರದಿಯು ಹೇಳುತ್ತದೆ. ಆದರೆ ಸವಾಲುಗಳು ಉಳಿದಿದ್ದು, ಭಾರತದ ಜನಸಾಂಖ್ಯಿಕ ಲಾಭವು (demographic dividend) ಆರ್ಥಿಕ ಲಾಭವಾಗಿ ಪರಿವರ್ತನೆಯಾಗುತ್ತದೆಯೇ ಎಂಬುದು ಕಾರ್ಮಿಕ ಮಾರುಕಟ್ಟೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಹೆಚ್ಚುತ್ತಿರುವ ಶಿಕ್ಷಿತರು ಮತ್ತು ಮಹತ್ವಾಕಾಂಕ್ಷೆಯುಳ್ಳ ಯುವಜನರನ್ನು ಎಷ್ಟರ ಮಟ್ಟಿಗೆ ಒಳಗೊಳ್ಳಲಾಗುತ್ತದೆ ಎಂಬ ಅಂಶ ನಿರ್ಧರಿಸುತ್ತದೆ.

"ಇಂದು ಯುವಕರು ಹಿಂದೆಂದಿಗಿಂತ ಹೆಚ್ಚು ಸುಶಿಕ್ಷಿತರಾಗಿದ್ದಾರೆ, ಮಾಹಿತಿಯುಳ್ಳವರಾಗಿದ್ದಾರೆ ಮತ್ತು ಮಹತ್ವಾಕಾಂಕ್ಷಿಗಳಾಗಿದ್ದಾರೆ. ಈ ಸಾಧನೆಗಳು ನಾವು ನಿಜಕ್ಕೂ ಹೆಮ್ಮೆಪಡುವಂತಹ ಸಾಧನೆಗಳು," ಎಂದು **ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯಗಳ ಅಧ್ಯಕ್ಷರಾದ ಇಂದು ಪ್ರಸಾದ್** ಹೇಳಿದರು.

ಈ ವರದಿಯು ಕಳೆದ ನಾಲ್ಕು ದಶಕಗಳ ಅಧಿಕೃತ ದತ್ತಾಂಶಗಳನ್ನು ಆಧರಿಸಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಯುವಕರ ಪಾಲ್ಗೊಳ್ಳುವಿಕೆ ಹೇಗೆ ಬದಲಾಗಿದೆ, ಜನಸಾಂಖ್ಯಿಕ ಲಾಭವನ್ನು ನಾವು ಹೇಗೆ ಬಳಸಿದ್ದೇವೆ, ಮತ್ತು ಅವರನ್ನು ಕಾರ್ಮಿಕ ಪಡೆಯ ಭಾಗವಾಗಿ ಒಳಗೊಳ್ಳುವಲ್ಲಿ ಏನೆಲ್ಲ ಸವಾಲುಗಳು ಮತ್ತು ಅವಕಾಶಗಳು ಎದುರಾಗುತ್ತವೆ ಎಂಬುದನ್ನು ವಿಶ್ಲೇಷಿಸುತ್ತದೆ.

"ಈ ವರದಿಯು ಯುವ ಕಾರ್ಮಿಕನ ಪ್ರಯಾಣವನ್ನು, ಅಂದರೆ ಶಿಕ್ಷಣದಿಂದ ಉದ್ಯೋಗದ ಹುಡುಕಾಟ ಮತ್ತು ಉದ್ಯೋಗ ದೊರಕಿಸಿಕೊಳ್ಳುವವರೆಗಿನ ಪ್ರಯಾಣವನ್ನು ಮತ್ತು ಈ ಚಲನೆಯು ಕಳೆದ ನಾಲ್ಕು ದಶಕಗಳಲ್ಲಿ ಹೇಗೆ ಬದಲಾಗಿದೆ ಎಂಬುದನ್ನು ನೋಡುತ್ತದೆ. ಈ ಚಲನೆಯ ಸವಾಲುಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಮತ್ತು ಒಂದು ಸಮನ್ವಯಿತ ನೀತಿಯನ್ನು ರೂಪಿಸಲು ಬುನಾದಿ ಸ್ವರೂಪದ ಆಕರವಾಗಿ ಈ ವರದಿ ನೆರವಾಗಬಹುದು"

ಎಂದು **ವರದಿಯ ಪ್ರಧಾನ ಲೇಖಕಿ ಮತ್ತು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ಸಹ ಪ್ರಾಧ್ಯಾಪಕಿಯಾದ ರೋಸಾ ಅಬ್ರಹಾಂ** ಹೇಳುತ್ತಾರೆ.

**ವರದಿಯ ಮುಖ್ಯಾಂಶಗಳು:**

- **ಜನಸಾಂಖ್ಯಿಕ ಲಾಭ ಶಿಖರದತ್ತ:** 2030 ರ ನಂತರ ಭಾರತದ ಕೆಲಸ ಮಾಡುವ ವಯಸ್ಸಿನ ಜನಸಂಖ್ಯೆಯ ಪ್ರಮಾಣ ಕುಸಿಯಲು ಆರಂಭವಾಗುತ್ತದೆ. ಮುಂದಿನ ದಶಕಗಳಲ್ಲಿ ಉದ್ಯೋಗ ಸೃಷ್ಟಿಯ ವೇಗವು, ಜನಸಾಂಖ್ಯಿಕ ಲಾಭವನ್ನು ಆರ್ಥಿಕ ಲಾಭವಾಗಿ ಪರಿವರ್ತಿಸಲು ಸಾಧ್ಯವಾಗುತ್ತದೆ ಎಂದು ಖಚಿತಪಡಿಸಲು ನಿರ್ಣಾಯಕವಾಗಲಿದೆ.

- **ಶಿಕ್ಷಣದ ಮಟ್ಟದ ಏರಿಕೆ:** ಕಳೆದ ನಾಲ್ಕು ದಶಕಗಳಲ್ಲಿ ಯುವಕರ ಶಿಕ್ಷಣದ ಮಟ್ಟವು, ವಿಶೇಷವಾಗಿ ಮಹಿಳೆಯರಲ್ಲಿಯೂ, ಗಣನೀಯವಾಗಿ ಹೆಚ್ಚಿದೆ. ಭಾರತದ ತೃತೀಯ ಅಥವಾ ಉನ್ನತ ಶಿಕ್ಷಣ ಹಂತದ ದಾಖಲಾತಿ ಪ್ರಮಾಣವು (28%) ತತ್ಸಮಾನ ಆದಾಯ ಹೊಂದಿರುವ ದೇಶಗಳ ಮಟ್ಟಕ್ಕೆ ಸಮಾನವಾಗಿದೆ.

- **ಪುರುಷರ ತೃತೀಯ/ಉನ್ನತ ಶಿಕ್ಷಣ ಹಂತದ ದಾಖಲಾತಿಯಲ್ಲಿ ಕುಸಿತ:** 2017ರಲ್ಲಿ ಶಿಕ್ಷಣ ಪಡೆಯುತ್ತಿದ್ದ ಯುವಕರ ಪ್ರಮಾಣವು 38% ಇತ್ತು. 2024ರ ಕೊನೆಯಲ್ಲಿ ಅದು 34%ಕ್ಕೆ ಇಳಿಯಿತು. ಕುಟುಂಬದ ಆದಾಯವನ್ನು ಬೆಂಬಲಿಸಬೇಕಾದ ಅನಿವಾರ್ಯವೇ ಬಹುತೇಕ ಯುವಕರು ಶಿಕ್ಷಣದಿಂದ ಹಿಂದೆ ಸರಿಯಲು ಇರುವ ಪ್ರಮುಖ ಕಾರಣವೆಂದು ಬಹುಪಾಲು ಯುವಕರು ತಿಳಿಸಿದ್ದಾರೆ.

- **ಉನ್ನತ ಶಿಕ್ಷಣ ಹಂತದ ಸಂಸ್ಥೆಗಳ ವಿಸ್ತರಣೆ:** ಕಾಲೇಜುಗಳ ಲಭ್ಯತೆ 2010ರಲ್ಲಿ ಪ್ರತಿ ಲಕ್ಷ ಯುವಕರಿಗೆ 29ರಿಂದ 2021ರಲ್ಲಿ 45ರವರೆಗೆ ಏರಿಕೆಯಾಗಿದ್ದು, ಇದು ಸಾಧ್ಯವಾಗಿರುವುದು ಮುಖ್ಯವಾಗಿ ಖಾಸಗಿ ಸಂಸ್ಥೆಗಳ ಮೂಲಕ. ಆದರೆ ಪ್ರಾದೇಶಿಕ ಅಸಮಾನತೆಗಳು ಇನ್ನೂ ದೊಡ್ಡ ಪ್ರಮಾಣದಲ್ಲೇ ಇವೆ.

- **ಶಿಕ್ಷಕರ ಕೊರತೆ:** ವಿದ್ಯಾರ್ಥಿಗಳ ಸಂಖ್ಯೆಯ ಏರಿಕೆಗೆ ತಕ್ಕಂತೆ ಅಧ್ಯಾಪಕರ ಸಂಖ್ಯೆ ಹೆಚ್ಚಾಗಿಲ್ಲ. ಎಐಸಿಟಿಇ ಮಾನದಂಡದ ಪ್ರಕಾರ ಪ್ರತಿ ಶಿಕ್ಷಕರಿಗೆ 15-20 ವಿದ್ಯಾರ್ಥಿಗಳಿರಬೇಕು, ಆದರೆ ಖಾಸಗಿ ಕಾಲೇಜುಗಳಲ್ಲಿ ಸರಾಸರಿ 28 ಮತ್ತು ಸರ್ಕಾರಿ ಕಾಲೇಜುಗಳಲ್ಲಿ 47 ವಿದ್ಯಾರ್ಥಿಗಳಿದ್ದಾರೆ.

- **ವೃತ್ತಿಪರ ಸಂಸ್ಥೆಗಳ ಕ್ಷಿಪ್ರ ವಿಸ್ತರಣೆ:** ಕೈಗಾರಿಕಾ ತರಬೇತಿ ಸಂಸ್ಥೆಗಳ (ITI) ಸಂಖ್ಯೆ 2010ರ ದಶಕದಿಂದ 300% ಹೆಚ್ಚಾಗಿದೆ, ಅದೂ ಮುಖ್ಯವಾಗಿ ಖಾಸಗಿ ಸಂಸ್ಥೆಗಳ ಮೂಲಕ. ಆದರೆ ಸಾಂಸ್ಥಿಕ ಗುಣಮಟ್ಟ ತೀವ್ರವಾಗಿ ಕುಸಿದಿದೆ.

- **ಉನ್ನತ ಶಿಕ್ಷಣ ಹೆಚ್ಚು ಜನಪರವಾದರೂ ಆರ್ಥಿಕ ಅಡೆತಡೆಗಳು ಉಳಿದಿವೆ:** 2007ರಿಂದ 2017ರವರೆಗೆ ಉನ್ನತ ಶಿಕ್ಷಣ ಪಡೆದ ಬಡ ಕುಟುಂಬಗಳ ವಿದ್ಯಾರ್ಥಿಗಳ ಪ್ರಮಾಣ 8%ರಿಂದ 15%ಕ್ಕೆ ಏರಿದೆ.

- **ವೃತ್ತಿಪರ ಕೋರ್ಸ್‌ಗಳಿಗೆ ಆರ್ಥಿಕ ಅಡೆತಡೆಗಳು:** ಎಂಜಿನಿಯರಿಂಗ್ ಮತ್ತು ವೈದ್ಯಕೀಯವನ್ನು ಹೆಚ್ಚು ಆಯ್ಕೆ ಮಾಡಿಕೊಳ್ಳುವವರಲ್ಲಿ ಶ್ರೀಮಂತ ಕುಟುಂಬಗಳ ವಿದ್ಯಾರ್ಥಿಗಳೇ ಹೆಚ್ಚಿರುವುದು ಕಂಡುಬರುತ್ತದೆ. ಏಕೆಂದರೆ ಈ ಪದವಿಗಳ ವೆಚ್ಚವು ಬಡ ಕುಟುಂಬಗಳ ವಾರ್ಷಿಕ ಆದಾಯಕ್ಕಿಂತ ಹೆಚ್ಚಾಗಿರುತ್ತದೆ.

- **ಶಿಕ್ಷಣದಿಂದ ಉದ್ಯೋಗಕ್ಕೆ ಕಷ್ಟಕರ ಪರಿವರ್ತನೆ:** 15-29 ವರ್ಷದ ಪದವೀಧರರ ನಿರುದ್ಯೋಗ ಪ್ರಮಾಣ ಹೆಚ್ಚಾಗಿಯೇ ಇದೆ (15-25 ವರ್ಷದವರಲ್ಲಿ 40% ಮತ್ತು 25-29 ವರ್ಷದವರಲ್ಲಿ 20%); ಮತ್ತು ಪದವಿ ಪಡೆದ ಒಂದು ವರ್ಷದೊಳಗೆ ಸ್ಥಿರ ಉದ್ಯೋಗ ಪಡೆಯುವವರ ಪ್ರಮಾಣ ಕಡಿಮೆ.

- **ಪದವೀಧರರ ವೇತನ ಲಾಭ:** ಪದವೀಧರರು ಪದವಿ ಇಲ್ಲದವರಿಗಿಂತ ದ್ವಿಗುಣ ವೇತನ ಪಡೆಯುತ್ತಾರೆ, ಮತ್ತು ಈ ಅಂತರ ವೃತ್ತಿಜೀವನದಲ್ಲಿ ಹೆಚ್ಚಾಗುತ್ತದೆ.

- **ಪುರುಷ ಪದವೀಧರರ ವೇತನ ಸ್ಥಗಿತ:** 2011ರಿಂದ ಯುವ ಪುರುಷ ಪದವೀಧರರ ಆರಂಭಿಕ ವೇತನದ ಬೆಳವಣಿಗೆ ನಿಧಾನವಾಗಿದೆ, ಆದರೆ ಲಿಂಗಗಳ ನಡುವಿನ ಅಂತರ ಕಡಮೆಯಾಗಿದೆ.

- **ಕೃಷಿಯಿಂದ ದೂರ ಸರಿಯುವಿಕೆ:** ಯುವ ಕಾರ್ಮಿಕರು ಕೃಷಿಯಿಂದ ವೇಗವಾಗಿ ಹೊರಬಂದು ಕೈಗಾರಿಕೆ ಮತ್ತು ಸೇವೆಗಳತ್ತ ಸಾಗುತ್ತಿದ್ದಾರೆ. ಐಟಿ, ಆಟೊಮೊಬೈಲ್ ತಯಾರಿಕೆ ಮತ್ತು ವ್ಯವಹಾರ ಸೇವೆಗಳಲ್ಲಿ ಯುವ ಮಹಿಳೆಯರು ಉದ್ಯೋಗ ಪಡೆಯುತ್ತಿರುವುದು ಹೆಚ್ಚಾಗಿದೆ ಎಂದು ಕಂಡುಬಂದಿದೆ.

- **ಜಾತಿ ಮತ್ತು ಲಿಂಗ ಆಧಾರಿತ ಉದ್ಯೋಗ ವಿಭಜನೆಯ ಕುಸಿತ:** ಪರಂಪರಾನುಗತವಾಗಿದ್ದ ಅವರದೇ ಜಾತಿ ಅಥವಾ ಲಿಂಗಕ್ಕೆ ಸಂಬಂಧಿಸಿದ ಉದ್ಯೋಗಗಳಲ್ಲಿ ಯುವಪೀಳಿಗೆ ಈಗ ಹೆಚ್ಚಾಗಿ ಕಂಡುಬರುತ್ತಿಲ್ಲ.

- **ಕಾರ್ಮಿಕ ಮಾರುಕಟ್ಟೆಯ ಪ್ರತಿಕ್ರಿಯೆಯಾಗಿ ವಲಸೆ:** ಯುವಕರ ವಲಸೆ ಪ್ರಾದೇಶಿಕ ಅಸಮಾನತೆಗಳನ್ನು ಸಮತೋಲನಗೊಳಿಸುತ್ತದೆ. ಬಡ ರಾಜ್ಯಗಳು, ಮತ್ತು ಯುವಜನರ ಸಂಖ್ಯೆ ಹೆಚ್ಚಿರುವ ರಾಜ್ಯಗಳು ಕಾರ್ಮಿಕರನ್ನು ಒದಗಿಸುತ್ತವೆ, ಹಾಗೂ ಹೆಚ್ಚಾಗಿ ವಯಸ್ಸಾದ ಜನಸಂಖ್ಯೆಯನ್ನು ಹೊಂದಿರುವ ಶ್ರೀಮಂತ ರಾಜ್ಯಗಳು ವಲಸಿಗ ಯುವಕರ ಮೇಲೆ ಹೆಚ್ಚು ಅವಲಂಬಿತವಾಗಿವೆ.

**ಮಾಧ್ಯಮ ಸಂಪರ್ಕಕ್ಕಾಗಿ:**

**ರೋಸಾ ಅಬ್ರಹಾಂ**

ಇಮೇಲ್: rosa.abraham@apu.edu.in

ಫೋನ್: +91-9901957009

**ಸೋನಿ ಶೆಟ್ಟಿ**

ಇಮೇಲ್: sony.shetty@azimpremjifoundation.org

ಫೋನ್: +91-9820900036

**ಸಮಿತ್ ಜೈನ್**

ಇಮೇಲ್: sumit.jain@k2communications.in

ಫೋನ್: +91-9886021715

**ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಕುರಿತು:**

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವನ್ನು ಕರ್ನಾಟಕ ಸರಕಾರದ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಕಾಯ್ದೆ 2010 ರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಭೋಪಾಲದಲ್ಲಿರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವನ್ನು ಮಧ್ಯಪ್ರದೇಶ ನಿಜಿ ವಿಶ್ವವಿದ್ಯಾಲಯ (ಸ್ಥಾಪನಾ ಏವಂ ಸಂಚಾಲನ್) ದ್ವಿತೀಯ ಸಂಶೋಧನ್ ಅಧಿನಿಯಮ್, 2022 ಅನುಸಾರ ಸ್ಥಾಪಿಸಲಾಗಿದೆ. ರಾಂಚಿಯಲ್ಲಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವನ್ನು ಜಾರ್ಖಂಡ್ ಸರ್ಕಾರದ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಕಾಯ್ದೆ 2022 ರ ಅಡಿಯಲ್ಲಿ ಸ್ಥಾಪಿಸಲಾಗುತ್ತಿದೆ.

ಪ್ರಾಯೋಜಕ ಸಂಸ್ಥೆಯಾಗಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್, ಈ ವಿಶ್ವವಿದ್ಯಾಲಯಗಳನ್ನು ನ್ಯಾಯಯುತ, ಸಮಾನ, ಮಾನವೀಯ ಮತ್ತು ಸುಸ್ಥಿರ ಸಮಾಜದ ನಿರ್ಮಾಣಕ್ಕಾಗಿ ಕೊಡುಗೆ ನೀಡಲು, ಸ್ಪಷ್ಟ ಸಾಮಾಜಿಕ ಉದ್ದೇಶದೊಂದಿಗೆ, ಸಂಪೂರ್ಣ ಲೋಕೋಪಕಾರಿ ಮತ್ತು ಲಾಭರಹಿತ ಸಂಸ್ಥೆಗಳಾಗಿ ರೂಪಿಸಿದೆ.